ದಿನಾಂಕ: ಜನವರಿ 20, 2014

# ಲೋಕಪಾಲರನ್ನು ಯಾರು ನೇಮಿಸಬೇಕು

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಲೋಕಪಾಲ್ ಹಾಗೂ ಲೋಕಾಯುಕ್ತ ಕಾಯಿದೆಗೆ ಕಡೆಗೂ 2013ರಲ್ಲಿ ಸ್ವೀಕೃತಿ ದೊರೆತಿದೆ. 2014ರ ಜನವರಿ ಆರಂಭದಲ್ಲಿ ರಾಷ್ಟ್ರಪತಿಗಳ ಅಂಕಿತ ದೊರೆತಿದ್ದು ಆದೇಶ ಹೊರಬಿದ್ದಿದೆ. ಲೋಕಪಾಲ್ ಸದಸ್ಯರು ಮತ್ತು ಅಧ್ಯಕ್ಷರ ನೇಮಕಾತಿಗಾಗಿ ಸಿಬ್ಬಂದಿ ಹಾಗೂ ತರಬೇತಿ ಇಲಾಖೆ ವಿವರವಾದ ಜಾಹಿರಾತು ಪ್ರಕಟಿಸಿದೆ. ಜಾಹಿರಾತಿನಲ್ಲಿ ಮಾದರಿ ಅರ್ಜಿ ನಮೂನೆ, ನಿಯಮಗಳು ಮತ್ತು ಅರ್ಹತಾ ನಿಬಂಧನೆಗಳನ್ನು ತಿಳಿಸಲಾಗಿದೆ.

ಈ ಪ್ರಕ್ರಿಯೆ ಆರಂಭಿಸಿದವರು ಯಾರು? ಸಿಬ್ಬಂದಿ ಹಾಗೂ ತರಬೇತಿ ಇಲಾಖೆ ಪ್ರಕ್ರಿಯೆಗೆ ಚಾಲನೆ ನೀಡಿದೆ ಹಾಗೂ ಆ ಮೂಲಕ ಖಾಲಿ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದೆ ಎಂದು ಜಾಹಿರಾತು ಸ್ಪಷ್ಟಪಡಿಸುತ್ತದೆ. ಆದರೆ ಸಂಸತ್‌ನ ಎರಡೂ ಸದನಗಳು ಅಂಗೀಕರಿಸಿದ ಕಾಯಿದೆ ವೀಕ್ಷಿಸಿದರೆ ತಿಳಿದು ಬರುವ ಅಂಶವೆಂದರೆ, ಅರ್ಜಿ ಕರೆಯುವ ಅಧಿಕಾರವೇ ಇಲಾಖೆಗೆ ಇಲ್ಲ.

ಲೋಕಪಾಲ್ ಸದಸ್ಯರ ನೇಮಕಾತಿ ಮಾಡುವ ಬಗೆಯನ್ನು ಕಾಯಿದೆಯ ಪರಿಚ್ಛೇದ 4 ತಿಳಿಸುತ್ತದೆ. ಪ್ರಧಾನ ಮಂತ್ರಿಗಳು, ಲೋಕಸಭಾ ಅಧ್ಯಕ್ಷರು, ಲೋಕಸಭಾ ವಿರೋಧ ಪಕ್ಷದ ನಾಯಕರು, ಭಾರತದ ಮುಖ್ಯ ನ್ಯಾಯಾಧೀಶರು ಅಥವಾ ಅವರಿಂದ ನಿಯುಕ್ತರಾದ ನ್ಯಾಯಾಧೀಶರು ಹಾಗೂ ಅವರಿಂದ ಆಯ್ಕೆಗೊಂಡ ಖ್ಯಾತ ವಕೀಲರನ್ನು ಒಳಗೊಂಡ ಆಯ್ಕೆ ಸಮಿತಿಯಿದೆ. ಗೊತ್ತಿರುವಂತೆ, ಈ ವರೆಗೂ ಆಯ್ಕೆ ಸಮಿತಿಯ ಮೊದಲ ನಾಲ್ಕು ಸದಸ್ಯರು ಒಂದು ಸಭೆಯೂ ಸೇರಿಲ್ಲ. ಮೊದಲು ಈ ನಾಲ್ಕು ಸದಸ್ಯರು ಸಭೆ ಸೇರಬೇಕು ಮತ್ತು ಐದನೆ ಸದಸ್ಯರನ್ನು ನೇಮಿಸಬೇಕು. ಐದು ಸದಸ್ಯರ ಆಯ್ಕೆ ಸಮಿತಿ ರೂಪಿಸಿದ ನಂತರ ಲೋಕಪಾಲ್ ಸದಸ್ಯರ ಪಟ್ಟಿ ಸಿದ್ಧಪಡಿಸಲು ಶೋಧನಾ ಸಮಿತಿ ರೂಪಿಸಬೇಕು. ವಿವಿಧ ರಂಗಗಳಲ್ಲಿ ಪರಿಣತಿ ಹೊಂದಿದ ಕನಿಷ್ಠ 7 ಜನರನ್ನು ಶೋಧನಾ ಸಮಿತಿ ಹೊಂದಿರಬೇಕು. ಲೋಕಪಾಲ್ ಅಧ್ಯಕ್ಷರು ಹಾಗೂ ಸದಸ್ಯರ ಹುದ್ದೆಗಳಿಗೆ ಯೋಗ್ಯವಾದವರನ್ನು ಶೋಧಿಸುವ ಕಾರ್ಯವನ್ನು ಶೋಧನಾ ಸಮಿತಿ ಮಾಡಬೇಕು.

ಪರಿಚ್ಛೇದ 4(4)ರ ಪ್ರಕಾರ ಲೋಕಪಾಲ್ ಅಧ್ಯಕ್ಷರು ಮತ್ತು ಸದಸ್ಯರ ಆಯ್ಕೆಗೆ ಆಯ್ಕೆ ಸಮಿತಿಯು ತನ್ನದೇ ಆದ ಪದ್ಧತಿಯನ್ನು ಪಾರದರ್ಶಕವಾಗಿ ರೂಪಿಸಬೇಕು. ಶೋಧನಾ ಸಮಿತಿ ಸೂಚಿಸುವ ಸಂಭಾವಿತರ ಪಟ್ಟಿಯಿಂದ ಯಾರನ್ನು ನೇಮಿಸಬೇಕು ಎಂದು ಆಯ್ಕೆ ಸಮಿತಿ ಸೂಚಿಸಬೇಕು. ಶೋಧನಾ ಸಮಿತಿ ನೀಡಿದ ಸಂಭಾವಿತರ ಪಟ್ಟಿಯಲ್ಲಿ ಕಾಣಿಸಿಕೊಳ್ಳದ ವ್ಯಕ್ತಿಗಳ ಹೆಸರನ್ನು ಆಯ್ಕೆ ಸಮಿತಿ ಪರಿಗಣಿಸಬಹುದು. ನೇಮಕಗೊಳ್ಳುವ ಎಂಟು ಸದಸ್ಯರಲ್ಲಿ ಕನಿಷ್ಠ ನಾಲ್ಕು ಸದಸ್ಯರು ಕಾನೂನು ಹಿನ್ನಲೆ ಹೊಂದಿರಬೇಕು. ಅಧ್ಯಕ್ಷತೆಯನ್ನು ಭಾರತದ ಮಾಜಿ ಮುಖ್ಯ ನ್ಯಾಯಾಧೀಶರು ಅಥವಾ ಸರ್ವೋಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಗೆ ಮಾತ್ರ ನೀಡಬಹುದಾಗಿದೆ.

ಈ ವೆರೆಗೂ, ಆಯ್ಕೆ ಸಮಿತಿ ರಚನೆಯಾಗಿಲ್ಲ. ಆದ್ದರಿಂದ ಶೋಧನಾ ಸಮಿತಿಯೂ ಇಲ್ಲ. ಲೋಕಪಾಲ್ ಸದಸ್ಯರು ಹಾಗೂ ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆಯನ್ನು ಆಯ್ಕೆ ಸಮಿತಿ ರೂಪಿಸಿಲ್ಲ. ಇಂಥಹ ಉನ್ನತ ಹುದ್ದೆಗೆ ಭಾರತದ ಮಾಜಿ ಮುಖ್ಯ ನ್ಯಾಯಾಧೀಶರು ಅಥವಾ ಸರ್ವೋಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರನ್ನು ನೇಮಿಸುವಾಗ, ಸಂಭಾವಿತರ ಸಂಖ್ಯೆ ಹೆಚ್ಚಾಗಿಲ್ಲದ ಕಾರಣ ಸಾರ್ವಜನಿಕ ಅರ್ಜಿ ಕೋರುವ ಅಗತ್ಯವಿಲ್ಲ. ಅದೇನೇ ಇದ್ದರು, ಜಾಹಿರಾತು ಪ್ರಕಟಿಸಬೇಕೆ ಬೇಡವೆ ಎಂಬ ನಿರ್ಧಾರವನ್ನು ಆಯ್ಕೆ ಸಮಿತಿ ತೆಗೆದುಕೊಳ್ಳಬೇಕು. ಅಧಿಕಾರಯುಕ್ತ ಸರ್ಕಾರಕ್ಕೆ ಇದರಲ್ಲಿ ಯಾವುದೇ ಪಾತ್ರವಿಲ್ಲ. ಕಾಯಿದೆಯ ಸ್ವರೂಪ ಈ ರೀತಿಯಾಗಿ ಇದ್ದರೂ, ಅಸ್ತಿತ್ವದಲ್ಲಿ ಇಲ್ಲದ ಆಯ್ಕೆ ಸಮಿತಿಯ ಅಧಿಕಾರವನ್ನು ಸಿಬ್ಬಂದಿ ಹಾಗೂ ತರಬೇತಿ ಇಲಾಖೆ ಅತಿಕ್ರಮಿಸಿದೆ. ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಸ್ವೀಕರಿಸಲು ಜಾಹಿರಾತು ಬಿಡುಗಡೆ ಮಾಡಿದೆ. ಸರ್ವೋಚ್ಚ ನ್ಯಾಯಾಲಯದ ಮಾಜಿ ಅಥವಾ ಹಾಲಿ ನ್ಯಾಯಾಧೀಶರು ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಆಲೋಚನೆ ನಿಜಕ್ಕೂ ಅವರ ಉನ್ನತ ಸ್ಥಾನದ ಘನತೆಗೆ ತಕ್ಕುದ್ದಲ್ಲ. ವೈಯಕ್ತಿಕ ವಿವರಗಳನ್ನುಳ್ಳ ಅರ್ಜಿ ಹಿಡಿದು ಸರ್ಕಾರದ ಮನವೊಲಿಸುವ ಕೆಲಸ ನಿವೃತ್ತ ನ್ಯಾಯಾಧೀಶರ ಆತ್ಮಗೌರವ ಹಾಗೂ ಘನತೆಗೆ ತಕ್ಕುದ್ದಲ್ಲ. ಹುದ್ದೆಗೆ ಹಾತೊರೆಯುವ ನ್ಯಾಯಾಧೀಶ ಲೋಕಪಾಲ್ ಸದಸ್ಯನಾಗಲು ಯೋಗ್ಯನಲ್ಲ. ಅದೇನೇ ಇದ್ದರು, ಅರ್ಜಿ ಕರೆಯಬೇಕೆ ಬೇಡವೆ ಎಂಬುದನ್ನು ಆಯ್ಕೆ ಸಮಿತಿ ನಿರ್ಧರಿಸಬೇಕು. ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಳ್ಳುವಂತಿಲ್ಲ. ಕಾಯಿದೆಯ ನಿಯಮಗಳಿಗೆ ವಿರುದ್ಧವಾಗಿ ಜಾಹಿರಾತು ಪ್ರಕಟಿಸಲಾಗಿದೆ. ಹುದ್ದೆಯ ಆಧಾರದ ಮೇಲೆ ನಾಮಾಂಕಿತರಾದ ಆಯ್ಕೆ ಸಮಿತಿಯ ನಾಲ್ಕು ಸದಸ್ಯರಾದ ಪ್ರಧಾನ ಮಂತ್ರಿಗಳು, ಲೋಕಸಭಾ ಅಧ್ಯಕ್ಷರು, ಭಾರತದ ಮುಖ್ಯ ನ್ಯಾಯಾಧೀಶರು ಹಾಗೂ ಲೋಕ ಸಭಾ ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆದು ಅವರ ಅಧಿಕಾರವನ್ನು ಸಿಬ್ಬಂದಿ ಹಾಗೂ ತರಬೇತಿ ಇಲಾಖೆ ಅತಿಕ್ರಮಮಾಡಿದೆ ಎಂದು ತಿಳಿಸಬಯಸಿದ್ದೇನೆ. ಅಕ್ರಮ ಜಾಹಿರಾತನ್ನು ಹಿಂಪಡೆಯಬೇಕಾಗಿದೆ.